ಸಿ.ಸಿ. ನಂ. 1216/2020

ಸಿ.ಡಬ್ಲ್ಯು 1

ಪಿ.ಡಬ್ಲ್ಯು 3

(ಇಂದು ದಿನಾಂಕಃ 15-11-2022 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ಆರೋಪಿ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

ಘಟನೆ ನಡೆಯಿತು ಎಂದು ಹೇಳುವ ಸಂದರ್ಭದಲ್ಲಿ ಲಾಕ್ ಡೌನ್ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ರಾತ್ರಿಯ ಕರ್ಫ್ಯೂ ಕಡ್ಡಾಯವಾಗಿ ವಿಧಿಸಲಾಗುತ್ತಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಪೊಲೀಸ ಗಸ್ತು ಹೊರತುಪಡಿಸಿ ಇತರ ವ್ಯಕ್ತಿಗಳ ಓಡಾಟ ಇರಲಿಲ್ಲ ಎಂದರೆ ಸರಿ. ಘಟನೆಯ ಸಂದರ್ಭದಲ್ಲಿ ರಾತ್ರಿ ಕರ್ಫ್ಯೂ ಇದ್ದ ಕಾರಣ ಬಸ ನಿಲ್ದಾಣದಲ್ಲಿ ಯಾವುದೇ ವ್ಯಕ್ತಿಗಳು ಇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ಸಂದರ್ಭದಲ್ಲಿ ಬಸ್ಸ ನಿಲ್ದಾಣದಲ್ಲಿ ಸುಮರು 5 ರಿಂದ 6 ಜನ ಇದ್ದಿರಬಹುದು. ಬಸ್ಸ ನಿಲ್ದಾಣ ಉತ್ತರ ದಿಕ್ಕಿನಲ್ಲಿ ಇರಬಹುದು. ಬಸ್ಸ ನಿಲ್ದಾಣದ ಎಡ ಭಾಗದಲ್ಲಿ ನಾವು ಓಮಿನಿ ವಾಹನವನ್ನು ನಿಲುಗಡೆ ಮಾಡಿರುತ್ತೇವೆ.

ಕುಮಟಾ ಬಸ್ಸ ನಿಲ್ದಾಣದ ಸುತ್ತ ಸುಮಾರು 12 ಅಡಿ ಎತ್ತರದ ಕಂಪೌಂಡ್ ಇದೆ ಎಂದರೆ ಸರಿ. ನಾವು ಓಮಿನಿ ವಾಹನವನ್ನು ನಿಲುಗಡೆ ಮಾಡಿದ 5 ರಿಂದ 10 ನಿಮಿಷಗಳಲ್ಲಿ ಘಟನೆ ಸಂಭವಿಸಿರುತ್ತದೆ. ಘಟನೆಯು ಆರೋಪಿಯು ಮೂತ್ರ ವಿಸರ್ಜನೆಗೆ ಎಂದು ಹೋಗಿರುವ ಸಂದರ್ಭದಲ್ಲಿ ಆಗಿರುತ್ತದೆ. ಶೌಚಾಲಯವನ್ನು ಶುಚಿ ಮಾಡುವ ವ್ಯಕ್ತಿಗಳು ಆರೋಪಿಯು ಮೂತ್ರ ವಿಸರ್ಜನೆಗೆ ಹೋದ ಸಂದರ್ಭದಲ್ಲಿ ಇರಲಿಲ್ಲ. ಆರೋಪಿಯು ಶೌಚಾಲಯದ ಒಳಭಾಗದಲ್ಲಿ ಸುಮಾರು 2 ರಿಂದ 3 ನಿ. ಗಳು ಇದ್ದಿರಬಹುದು. ಆರೋಪಿಯು ಶೌಚಾಲಯಕ್ಕೆ ಹೋಗುತ್ತೇನೆ ಎಂದು ಹೇಳಿ ಹೋದ 5 ನಿ. ನಂತರ ಆತ ಓಡಿ ಹೋಗಿರುವ ಬಗ್ಗೆ ನನಗೆ ತಿಳಿದು ಬಂದಿರುತ್ತದೆ.

ಶೌಚಾಲಯಕ್ಕೆ ಹೋಗುವ ಸಂದರ್ಭದಲ್ಲಿ ಶೌಚಾಲಯದವರಿಗೆ ನಾನು ಆರೋಪಿಯ ಬೆನ್ನ ಹಿಂದೆಯೇ ಇದ್ದೆನು, ಆತ ಶೌಚಾಲಯದ ಒಳಗೆ ಹೋದಾಗ ನಾನು ಬಾಗಿಲ ಬಳಿ ಇದ್ದೆನು. ಆರೋಪಿಯು ಶೌಚಾಲಯದ ಬಾಗಿಲಿನ ಕಡೆಯಿಂದ ಓಡಿ ಹೋಗಿರುತ್ತಾನೆ.

ಆರೋಪಿಯು ಓಡಿ ಹೋದ ಸುಮಾರು ಅರ್ಧ ಗಂಟೆಯ ಅವಧಿಯ ಒಳಗೆ ನಾನು ಠಾಣೆಗೆ ಮಾಹಿತಿಯನ್ನು ನೀಡಿರುತ್ತೇನೆ. ಆರೋಪಿಯು ಓಡಿ ಹೋದ ನಂತರ ನಾವು ಮಾಸ್ತಿಕಟ್ಟೆ ರೈಲ್ವೆ ನಿಲ್ದಾಣದ ಬಳಿ ಹಾಗೂ ಇತರ ಸುತ್ತ ಮುತ್ತಲಿನ ಪ್ರದೇಶದಲ್ಲಿ ಆತನನ್ನು ಹುಡುಕುವ ಪ್ರಯತ್ನ ಮಾಡಿರುತ್ತೇವೆ. ಆರೋಪಿಯು ಬಸ್ಸ ನಿಲ್ದಾಣದ ಬಲ ಭಾಗದಲ್ಲಿ ಓಡಿ ಹೋಗಿರುತ್ತಾನೆ. (ನ್ಯಾಯಾಲಯದಿಂದ ಬಸ್ಸ ನಿಲ್ದಾಣದ ಬಲ ಭಾಗ ಯಾವ ರೀತಿ ಎಂದು ಕೇಳಲಾಗಿ ಸಾಕ್ಷಿಯು ಬಸ್ಸ ನಿಲ್ದಾಣದ ಎದುರಿಗೆ ನಿಂತಾಗ ಇರುವ ಬಲ ಭಾಗಕ್ಕೆ ಓಡಿ ಹೋಗಿರುತ್ತಾನೆ ಎಂದು ನುಡಿದಿರುತ್ತಾರೆ) ಆರೋಪಿಯು ಹೊನ್ನಾವರದ ರಸ್ತೆಯ ದಿಕ್ಕಿನಲ್ಲಿ ಓಡಿ ಹೋಗಿರುತ್ತಾನೆ.

ಆರೋಪಿಯನ್ನು ನಾನು, ಇತರ ಸಿಬ್ಬಂದಿಯವರು ಹಾಗೂ 3 ರಿಂದ 4 ಜನ ಸಾರ್ವಜನಿಕರು ಸೇರಿ ಹುಡುಕಿರುತ್ತೇವೆ. ನಮ್ಮೊಂದಿಗೆ ಆರೋಪಿಯನ್ನು ಹುಡುಕುತ್ತಿದ್ದ ಸಾರ್ವಜನಿಕರು ಸ್ಥಳದಲ್ಲಿಯೇ ಇದ್ದರು. ನಾವು ಆರೋಪಿಯನ್ನು ಹುಡುಕುತ್ತಿದ್ದಾಗ ಸದರಿ 3 ರಿಂದ 4 ಜನ ಸಾರ್ವಜನಿಕರು ನಮ್ಮನ್ನು ಕೇಳಿದಾಗ ನಾವು ವಿಚಾರವನ್ನು ಅವರಿಗೆ ತಿಳಿಸಿರುತ್ತೇವೆ.

ನಾನು ತಡರಾತ್ರಿ ಸುಮಾರು 12.00 ರಿಂದ 12.30 ಗಂಟೆಗೆ ಫಿರ್ಯಾದನ್ನು ನೀಡಿರುತ್ತೇನೆ. ಆರೋಪಿಯನ್ನು ಹುಡುಕಲು ನಾನು ಫಿರ್ಯಾದು ನೀಡುವ ಪೂರ್ವದಲ್ಲಿಯೇ ಠಾಣೆಯ ಸಿಬ್ಬಂದಿಗಳು ಸ್ಥಳಕ್ಕೆ ಬಂದಿದ್ದರು. ಹೊನ್ನಾವರ ಗುನ್ನಾ ಸಂಖ್ಯೆ 317/2020 ರ ಫಿರ್ಯಾದುದಾರರು ಯಾರು ಎಂದು ನನಗೆ ನೆನಪಿಲ್ಲ. ಸದರಿ ಪ್ರಕರಣದ ಫಿರ್ಯಾದುದಾರರು ನನ್ನ ಪರಿಚಯಸ್ಥರು ಎಂದರೆ ನೆನಪಿಲ್ಲ. ಸದರಿ ಪ್ರಕರಣರಣದ ಫಿರ್ಯಾದುದಾರರು ಹೊನ್ನಾವರದ ಪ್ರಭಾವಿ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ಹೊನ್ನಾವರದ ಪ್ರಕರಣದಲ್ಲಿ ಆರೋಪಿಗೆ ಜಾಮೀನು

ಸಿಗಬಹುದು ಎಂದು ತಿಳಿದು, ಜಾಮೀನು ಸಿಗಬಾರದು ಎಂಬ ಉದ್ದೇಶದಿಂದ ಆರೋಪಿಗೆ ಜಾಮೀನು ಸಿಕ್ಕಿದೆ ಎಂದು ಹೇಳಿ ನಂಬಿಸಿ ನಾವೇ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿಯು ಕುಮಟಾದ ಹಂದಿಗೋಣದ ನಿವಾಸಿ ಎಂದರೆ ಸರಿ. ಆರೋಪಿಗೆ ಜಾಮೀನು ಸಿಕ್ಕಿರುವುದಾಗಿ ನಾವು ಹೇಳಿ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ನಾವೇ ಆರೋಪಿಯನ್ನು ಕಳುಹಿಸಿ ನಂತರದಲ್ಲಿ ಮೇಲಾಧಿಕಾರಿಗಳಿಗೆ ಸುಳ್ಳು ಮಾಹಿತಿಯನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಸುಳ್ಳು ಫಿರ್ಯಾದನ್ನು ನೀಡಲು ಹೊನ್ನಾವರದ ಗುನ್ನಾ ಸಂಖ್ಯೆ 117/2020 ರ ಫಿರ್ಯಾದುದರರ ಪ್ರಭಾವವೇ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಾವು ಹುಡುಕುತ್ತಿದ್ದೆನು ಎಂದು ಹೇಳುವ ಸಂದರ್ಭದಲ್ಲಿ ಆತ ತನ್ನ ಮನೆಯದಲ್ಲಿಯೇ ಇದ್ದ ಎಂದರೆ ಸರಿಯಲ್ಲ. ಆರೋಪಿಯು ನಾನು ಜಾಮೀನು ಸಿಕ್ಕಿದ ಎಂದು ಹೇಳಿದ್ದನ್ನು ನಂಬಿದ ಕಾರಣ ತನ್ನ ಮನೆಗೆ ಹೋಗಿ ಮನೆಯಲ್ಲಿಯೇ ಇದ್ದ ಎಂದರೆ ಸರಿಯಲ್ಲ. ನಾನು ನೀಡಿರುವಂತಹ ಫಿರ್ಯಾದು ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿಯು ಓಡಿ ಹೋಗಿರುವುದಿಲ್ಲ ಹಾಗೂ ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಿಸಿರುವ ಸುಳ್ಳು ಫಿರ್ಯಾದಿಗೆ ಪೂರಕವಾಗುವ ರೀತಿಯಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಕುಮಟಾದ ಮುಖ್ಯ ಪ್ರದೇಶಗಳಲ್ಲಿ ಸಿ ಸಿ ಕ್ಯಾಮರಾ ಅಳವಡಿಸಲಾಗಿದೆ ಎಂದರೆ ಇರಬಹುದು, ಅದೇ ರೀತಿಯಾಗಿ ಬಸ್ಸ ನಿಲ್ದಾಣದ ಬಳಿ ಹಾಗೂ ಮಾಸ್ತಿ ಕಟ್ಟೆಯ ಬಳಿ ಸಿ ಸಿ ಕ್ಯಾಮರಾ ಅಳವಡಿಸಲಾಗಿದೆ ಎಂದರೆ ಇರಬಹುದು. ಸದರಿ ಸಿ ಸಿ ಕ್ಯಾಮರಾಗಳ ಚಿತ್ರಣಗಳು ಠಾಣೆಯಲ್ಲಿ ಗೋಚರವಾಗುತ್ತಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ